ಉತ್ತರ ಕೊಟ್ಟಿದ್ದಾರೆ. ಇದು ನನ್ನ ಗಮನಕ್ಕೂ ಕೂಡ ಬಂದಿದೆ. ಆದರೆ ಆ ಬಗ್ಗೆ ಯೋಜನಾ ರೂಪದಲ್ಲಾಗಲೀ ಅಥವಾ ಒಂದು ಸ್ಪೆಸಿಫಿಕ್ ಪ್ರಾಜೆಕ್ಟ್ ಅನ್ನಾಗಲೀ ಮಾಡಿತ್ತೇವೆಂದು ಯಾರೂ ಕೂಡ ಮುಂದೆ ಬಂದಿಲ್ಲ. ತುಮಕೂರು ಜಿಲ್ಲೆಯಲ್ಲಿ ತೆಂಗು ಬಹಳ ಮುಖ್ಯವಾದ ಬೆಳೆಯಾಗಿದೆ. ಕೇಂದ್ರ ಸರಕಾರದವರು ಯಾವುದಾದರೊಂದು ಯೋಜನೆಯಲ್ಲಿ ತೆಂಗು ಸಂಶೋಧನಾ ಕೇಂದ್ರವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ಎಂತ್ತು ಅವರಿಗೆ ಜಮೀನು ಎಷ್ಟು ಬೇಕಾಗುತ್ತದೆ ಎಂದು ಹೇಳಿದರೆ ಖಂಡಿತಾ ನಾವು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮಾರ್ಕಂಡೆಯ ಯೋಜನೆ ಬಗ್ಗೆ

೧೫೬೭. ಶ್ರೀ ಎಂ. ಎಸ್. ಮುತ್ತಣ್ಣನವರ್(ಗೋಕಾಕ್).—ಮಾನ್ಯ ಕಂದಾಯ ಮತ್ತು ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾರ್ಕಂಡೆಯ ಯೋಜನಾ ಅಂದಾಜು ವೆಚ್ಚವೆಷ್ಟು ?

ಆ) ಮಾರ್ಕಂಡೆಯ ಯೋಜನೆಯ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು,

ಇ) ಮಾರ್ಕಂಡೆಯ ಯೋಜನೆಯಲ್ಲಿ ಎಷ್ಟು ಹಳ್ಳಿಗಳು ಮುಳುಗಡೆ ಆಗುವುವು ಹಾಗೂ ಅವು ಯಾವುವು

ಈ) ಆ ಹಳ್ಳಿಗಳ ಜನರಿಗೆ ಪುನರ್ವಸತಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದೆ ?

ಉ) ಈ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಹಣದ ಸಹಾಯ ದೊರಕಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಯಿಂದ
ಉ) ವರೆಗೆ } ಈ ಯೋಜನೆಯು ಇನ್ನೂ ಅನ್ವೇಷಣಾ ಹಂತದಲ್ಲಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾರ್ಕಂಡೆಯ ಯೋಜನೆ ಬಗ್ಗೆ ಈಗಾಗಲೇ ಪ್ಲಾನ್ ಫೀಸಿಬಿಲಿಟಿ ತಯಾರಾಗಿ ಬಂದಿತ್ತು. ಪುನಃ ಕೆಲವು ವಿವರಗಳು ಬೇಕಾಗಿರುವುದರಿಂದ ಅದನ್ನು ಪಡೆದು ಆದಷ್ಟು ಬೇಗ ಇದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ. ಎಸ್. ಮುತ್ತಣ್ಣನವರ್.—ಹಿರಿಯ ಮಂತ್ರಿಗಳಾದ ಶ್ರೀ ಬೊಮ್ಮಾಯಿ ಅವರು ಬೆಳಗಾಂಗೆ ಬಂದಾಗ ಇದಕ್ಕೆ ಈ ಯೋಜನೆಗೆ ಅಡಿಗಲ್ ಅನ್ನು ಹಾಕುತ್ತೇವೆ ಕೆಲಸ ಪ್ರಾರಂಭ ಮಾಡ್ತೀ ಕ್ಕೇವೆಂದು ಹೇಳಿದ್ದಾರೆ. ಯಾವಾಗ ಇದನ್ನು ಪ್ರಾರಂಭ ಮಾಡುತ್ತಾರೆ, ಇದು ಇನ್ನೂ ಅನ್ವೇಷಣಾ ಹಂತದಲ್ಲಿದೆಯೆಂದು ಈಗ ಉತ್ತರ ಕೊಟ್ಟಿದ್ದೀರಿ. ಆದರೆ ಈ ಹಿಂದೆ ಇದರ ಕೆಲಸ ಮುಗಿದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದರೆ ಇದು ಅಧಿಕಾರಿಗಳ ತಪ್ಪೇ. ಮಾನ್ಯ ಮಂತ್ರಿಗಳು ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಟೆಕ್ನಿಕಲ್ ಕಮಿಟಿ ಮುಂದೆ ಇಟ್ಟಿದ್ದೆವು. ಬಾಳೇಕುಂದ್ರಿ ಕಮಿಟಿಯವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ವಿವರವನ್ನು ಪಡೆದು ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ.

ಖಾಸಗೀ ಶಾಲೆಗಳು ಹಾಗೂ ಟ್ಯುಟೋರಿಯಲ್‌ಗಳು.

೧೧೮೬. ಶ್ರೀ ಪಿ. ಎಂ. ಚಿಕ್ಕಬೋರಯ್ಯ(ಚಾಮರಾಜ).—ಮಾನ್ಯ ಪ್ರಾಥಮಿಕ ಹಾಗೂ ಪ್ರಾಥ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಖಾಸಗಿ ಶಾಲೆಗಳು ಹಾಗೂ ಟ್ಯುಟೋರಿಯಲ್‌ಗಳು ಎಷ್ಟು ?